# ೧೧ನೇ ಭಾಗ.

## ಶಿಕ್ಷಣ. ೧೮೮೨—೮೩ ಅಥವಾ ೧೮೮೧—೮೨.

**ಶಾ**ಲೆಗಳೂ ವಿದ್ಯಾರ್ಥಿಗಳೂ.—ಧಾರವಾಡ ಜಿಲ್ಲೆಯಲ್ಲಿ ಸನ್ ೧೮೮೨-೮೩ನೇ ವರ್ಷದಲ್ಲಿ ಸರಕಾರೀ ಶಾಲೆಗಳು ವೊಟ್ಟಿಗೆ ೩೫೬ ಇದ್ದವು; ಅಂದರೆ ಸರಾಸರೀ ಮಾನದಿಂದ ೪ ಹಳ್ಳಿಗಳಿಗೆ ವೊಂದು ಶಾಲೆಯಾಗುತ್ತದೆ. ಈ ಶಾಲೆಗಳ ರಜಿಷ್ಟರುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ೨೯೭೧೧, ಅವರ ಸರಾಸರೀ ಹಜಿರಿ ೧೯೨೦೬ ಇತ್ತು; ಇದರಿಂದ ೬ರಿಂದ ೧೪ರ ವರೆಗೆ ವಯಸ್ಸುಳ್ಳ ವೊಟ್ಟು ಹುಡುಗರ ಸಂಖ್ಯೆದಲ್ಲಿ ಶೇಕಡಾ ೭.೯೩ ಹುಡುಗರು ಸರಕಾರೀ ಶಾಲೆಗಳಲ್ಲಿ ಕಲಿಯುತ್ತಿದ್ದರೆಂದು ಸಿದ್ಧವಾಗುತ್ತದೆ.

ಬೆಳಗಾವೀ ಜಿಲ್ಲೆಯಲ್ಲಿ ಸದರೀ ವರ್ಷ ವೊಟ್ಟು ಶಾಲೆಗಳು ೧೮೭; ಸರಾಸರೀ ೬ ಹಳ್ಳಿಗೆ ವೊಂದು ಶಾಲೆ; ರಜಿಷ್ಟರಿನ ಸಂಖ್ಯೆ ೧೬೩೮೦; ಸರಾಸರೀ ಹಜಿರಿ ೧೦೪೭೦; ೬ರಿಂದ ೧೪ರ ವರೆಗೆ ವಯಸ್ಸಿನವರಲ್ಲಿ ಶಾಲೆಗೆ ಹೋಗುವವರು ಶೇಕಡಾ ೪.೪೯.

ವಿಜಾಪುರ ಜಿಲ್ಲೆಯಲ್ಲಿ ಸದರೀ ವರ್ಷ ಶಾಲೆಗಳು ೧೫೬; ಸರಾಸರೀ ೮ ಹಳ್ಳಿಗೆ ವೊಂದು ಶಾಲೆ; ರಜಿಷ್ಟರಿನ ಸಂಖ್ಯೆ ೧೦೧೮೧; ಸರಾಸರೀ ಹಜಿರಿ ೭೬೩೦; ೬ರಿಂದ ೧೪ರ ವರೆಗೆ ವಯಸ್ಸಿನವರಲ್ಲಿ ಶಾಲೆಗೆ ಹೋಗುವವರು ಶೇಕಡಾ ೪.೧೬.

ಕಾನಡಾ ಜಿಲ್ಲೆಯಲ್ಲಿ ಸನ್ ೧೮೮೧-೮೨ನೇ ವರ್ಷ ಶಾಲೆಗಳು ೧೧೩; ಸರಾಸರೀ ೧೦ ಹಳ್ಳಿಗೆ ವೊಂದು ಶಾಲೆ; ರಜಿಷ್ಟರಿನ ಸಂಖ್ಯೆ ೬೨೫೬; ಸರಾಸರೀ ಹಜಿರಿ ೪೭೪೨; ೬ರಿಂದ ೧೪ರ ವರೆಗೆ ವಯಸ್ಸಿನವರಲ್ಲಿ ಶಾಲೆಗೆ ಹೋಗುವವರು ಶೇಕಡಾ ೮.೬೨.

**ಕಾಮದಾರರು.**—ನಾಲ್ಕೂ ಜಿಲ್ಲೆಗಳಲ್ಲಿ ದೇಶಭಾಷೆಯ ಶಾಲೆಗಳ ತಪಾಸಣೆಗಾಗಿ ವೊಬ್ಬೊಬ್ಬ ಡೆಪ್ಯುಟೀ ಇನ್‌ಸ್ಪೆಕ್ಟರನು ತಿಂಗಳಿಗೆ ೧೫೦ ರೂಪಾಯಿ ಸಂಬಳವುಳ್ಳವ; ಧಾರವಾಡಕ್ಕೆ ಇಬ್ಬರು, ಬೆಳಗಾವಿ ವಿಜಾಪುರ ಜಿಲ್ಲೆಗಳಿಗೆ ವೊಬ್ಬೊಬ್ಬ ಅಸಿಷ್ಟಾಂಟ ಡೆಪ್ಯುಟಿ ಇನ್‌ಸ್ಪೆಕ್ಟರರು ತಿಂಗಳಿಗೆ ೭೫ ರೂಪಾಯಿ ಸಂಬಳ ಉಳ್ಳವರಿದ್ದರು. ಮಾಸ್ತರ ಜನರು ಅಸಿಷ್ಟಾಂಟರು ಸಹಿತ ವೊಟ್ಟಿಗೆ ಧಾರವಾಡ ಜಿಲ್ಲೆಯಲ್ಲಿ ೯೫೭ ಜನ, ಬೆಳಗಾವೀ ಜಿಲ್ಲೆಯಲ್ಲಿ ೫೨೮ ಜನ, ವಿಜಾಪುರ ಜಿಲ್ಲೆಯಲ್ಲಿ ೩೭೯ ಜನ, ಕಾನಡಾ ಜಿಲ್ಲೆಯಲ್ಲಿ ೨೧೬ ಜನ ಇದ್ದರು. ಕನ್ನಡ ಶಾಲೆಗಳ ಮಾಸ್ತರರ ಸಂಬಳವು ತಿಂಗಳಿಗೆ ೩ರಿಂದ ೪೦ ರೂಪಾಯಿಯ ವರೆಗೆ ಇರುತ್ತಿತ್ತು. ಈ ಯಾವತ್ತು ಜನ ಮಾಸ್ತರರೂ ಡೆಪ್ಯುಟೀ ಇನ್‌ಸ್ಪೆಕ್ಟರರೂ ಅವರ ಅಸಿಷ್ಟಾಂಟರೂ ದಕ್ಷಿಣ ಭಾಗದ ಇನ್‌ಸ್ಪೆಕ್ಟರನಿಗೂ ಡಾಯರೇಕ್ಟರನಿಗೂ ಅಂಕಿತರಾಗಿ ಕೆಲಸ ಮಾಡುವರು.

**ಶಾಲೆಗಳ ಪ್ರಕಾರಗಳೂ ಶಿಕ್ಷಣವೂ.**—ಸದರೀ ವರ್ಷದಲ್ಲಿ ಧಾರವಾಡದಲ್ಲಿ ಟ್ರೇನಿಂಗ ಕಾಲೇಜವು ಈಗಿನಂತೆಯೇ ನಡಿಯುತ್ತಿತ್ತು; ಧಾರವಾಡ, ಬೆಳಗಾವಿ,

ಈ ಯೆರಡು ಗ್ರಾಮಗಳಲ್ಲಿ ಹಾಯಸ್ಕೂಲುಗಳಿದ್ದವು. ಬೆಳಗಾವಿಯ ಹಾಯಸ್ಕೂಲನ್ನು ಸನ್ ೧೮೫೦ರಲ್ಲಿ ದಕ್ಷಿಣ ಮಹಾರಾಷ್ಟ್ರದ ಸರದಾರರು ವರ್ಗಣಿಯಿಂದ ಸ್ಥಾಪಿಸಿದ ಕಾರಣ ಅದಕ್ಕೆ ಸರದಾರರ ಶಾಲೆಯೆಂದೆನ್ನುವರು. ಆದರೆ ಅದು ಮುಂದೆ ಸರಕಾರೀ ಶಾಲೆಯಾಯಿತು. ಧಾರವಾಡದ ಹಾಯಸ್ಕೂಲು ಸನ್ ೧೮೭೦ರ ಸುಮಾರಿನಲ್ಲಿ ಆರಂಭ ವಾಯಿತು. ಈ ಯೆರಡೂ ಶಾಲೆಗಳಲ್ಲಿ ಮಾಟ್ರಿಕ್ಯುಲೆಶನ್ ಸ್ಟಾಂಡರ್ಡಿನ ವರೆಗೆ ಇಂಗ್ಲಿಷ ಮುಂತಾದ ವಿಷಯಗಳನ್ನು ಕಲಿಸುವರು. ಇದಲ್ಲದೆ ಧಾರವಾಡ ಜಿಲ್ಲೆಯಲ್ಲಿ ೨, ಬೆಳಗಾವಿಯಲ್ಲಿ ೧, ಕಲಾದಗಿಯಲ್ಲಿ ೧, ಕಾರವಾಡದಲ್ಲಿ ೧, ಅಂತೂ ೫ ೧ನೇ ವರ್ಗದ ಅಂಗ್ಲೋ ವರ್ನ್ಯಾಕ್ಯುಲರ ಶಾಲೆಗಳಿದ್ದವು. ಇವುಗಳಲ್ಲಿ ೩ನೇ ಸ್ಟಾಂಡರ್ಡಿನ ವರೆಗೆ ಇಂಗ್ಲಿಷವನ್ನೂ ಕಲಿಸುವರು. ಇವಲ್ಲದೆ ವೊಂದೇ ವರ್ಗಕ್ಕೆ ಇಂಗ್ಲಿಷ ಕಲಿಸುವಂಥ ೨ನೇ ವರ್ಗದ ಅಂಗ್ಲೋ ವರ್ನ್ಯಾಕ್ಯುಲರ ಶಾಲೆಗಳು ಧಾರವಾಡ, ಬೆಳಗಾವಿ, ವಿಜಾಪುರ, ಕಾನಡಾ ಜಿಲ್ಲೆಗಳಲ್ಲಿ ಕ್ರಮವಾಗಿ ೮, ೮, ೫, ೫ ಇದ್ದವು. ಧಾರವಾಡದಲ್ಲಿ ೧ ಕೈಗಾರಿಕೆಯ ಶಾಲೆ, ೧ ಪೋಲೀಸ ಶಾಲೆ, ೧ ತುರಂಗದ ಶಾಲೆ, ಹೀಗೆ ಮೂರು ಬೇರೆ ಶಾಲೆಗಳಿದ್ದವು; ಅವುಗಳಲ್ಲೆಲ್ಲ ಕನ್ನಡ ಕಲಿಸುವರು. ಮರಾಠೀ ಭಾಷೆಯನ್ನು ಕಲಿಸುವ ಶಾಲೆಗಳು ಧಾರವಾಡ, ಬೆಳಗಾವಿ, ವಿಜಾಪುರ, ಕಾನಡಾ ಜಿಲ್ಲೆಗಳಲ್ಲಿ ಕ್ರಮವಾಗಿ ೩, ೪೨, ೩, ೫ ಇದ್ದವು; ಹಿಂದುಸ್ತಾನಿಯನ್ನು ಕಲಿಸುವ ಶಾಲೆಗಳು ೪, ೪, ೪, ೧೦ ಇದ್ದವು. ಉಳಿದ ಶಾಲೆಗಳಲ್ಲಿ, ಅಂದರೆ ಸದರೀ ಜಿಲ್ಲೆಗಳಲ್ಲಿ ಕ್ರಮವಾಗಿ ೩೩೪, ೧೩೭, ೧೪೩, ೭೮ ಶಾಲೆಗಳಲ್ಲಿ ಕನ್ನಡ ಭಾಷೆಯನ್ನು ಕಲಿಸುವರು. ಇವುಗಳಲ್ಲಿ ಸದರೀ ಕ್ರಮದಂತೆ ೧೭, ೯, ೮, ೪, ಹೆಣ್ಣು ಮಕ್ಕಳ ಶಾಲೆಗಳಿದ್ದವು; ಉಳಿದವೆಲ್ಲ ಗಂಡು ಹುಡುಗರ ಶಾಲೆಗಳು.

ಇತರ, ಅಂದರೆ ಸರಕಾರೀ ಅಲ್ಲದಂಥ ಶಾಲೆಗಳು.—ಧಾರವಾಡ ಜಿಲ್ಲೆಯಲ್ಲಿ ಇತರ ಶಾಲೆಗಳು ೩೬ ಇದ್ದವು. ಅವುಗಳಲ್ಲಿ ೨೧ ಜಹಾಗೀರ ಇಲಾಖೆಯಲ್ಲಿ ಇದ್ದು, ವಿದ್ಯಾಖಾತೆಯ ಅಧಿಕಾರಿಗಳು ಅವುಗಳ ತಪಾಸಣಿಗೆ ಹೋಗುವರು. ಉಳಿದ ೧೫ ಶಾಲೆಗಳಿಗೆ ಸರಕಾರದಿಂದ ಸಹಾಯ ದೊರಿಯುತ್ತಿತ್ತು. ಅವುಗಳಲ್ಲಿ ೫ ಗಂಡು ಹುಡುಗರವು, ೩ ಹೆಣ್ಣು ಮಕ್ಕಳವು, ಅಂತೂ ೮ ಜರ್ಮನ್ ಮಿಶನರಿಗಳ ಶಾಲೆಗಳಿದ್ದವು; ಒಂದು ಧಾರವಾಡದಲ್ಲಿ ಯುರೋಪಿಯನ್ ಯೂರೇಶಿಯನ್ ಹೆಣ್ಣು ಮಕ್ಕಳ ಶಾಲೆ ಇತ್ತು; ಉಳಿದ ಆರು ದೇಶೀ ಗಂಡು ಹುಡುಗರ ಶಾಲೆಗಳಿದ್ದವು. ೨೧ ಜಹಾಗೀರ ಶಾಲೆಗಳಲ್ಲಿ ೧ ಅಂಗ್ಲೋ ವರ್ನ್ಯಾಕ್ಯುಲರ, ೪ ಗಂಡು ಹುಡುಗರವು, ೧ ಹೆಣ್ಣು ಮಕ್ಕಳದು, ಅಂತೂ ೬ ಸವಣೂರಲ್ಲಿ; ೧ ಅಂಗ್ಲೋ ವರ್ನ್ಯಾಕ್ಯುಲರ, ೧೧ ಗಂಡು ಹುಡುಗರವು, ೩ ಹೆಣ್ಣು ಮಕ್ಕಳವು, ಪಟವರ್ಧನ ಇಲಾಖೆಯಲ್ಲಿ ಇದ್ದವು.

ಬೆಳಗಾವೀ ಜಿಲ್ಲೆಯಲ್ಲಿ ಸರಕಾರೀ ಮದ್ದತು ದೊರಿಯುವಂಥ ಶಾಲೆಗಳು ವೊಟ್ಟಿಗೆ ೧೫ ಇದ್ದವು. ಅವುಗಳಲ್ಲಿ ೨ ಯುರೋಪಿಯನ್ ಯೂರೇಶಿಯನ್ ಗಂಡು ಹುಡುಗರವು, ೧ ಸದರೀ ಹೆಣ್ಣು ಮಕ್ಕಳದು, ಅಂತೂ ೩ ಬೆಳಗಾವಿಯ ಯೂರೋಪಿಯನ್ ಜನ

ರವು; ೧ ಹಾಯಸ್ಕೂಲು, ೧ ಹೆಣ್ಣು ಮಕ್ಕಳದು, ೧ ಮರಾಠೀ ಗಂಡು ಹುಡುಗರದು, ೨ ಕನ್ನಡ ಗಂಡು ಹುಡುಗರವು, ಅಂತೂ ೬ ಮಿಶನರೀ ಶಾಲೆಗಳು; ೧ ಮರಾಠೀ ಹೆಣ್ಣು ಮಕ್ಕಳದು ಬೆಳಗಾವಿಯ ಊರವರು ಸ್ಥಾಪಿಸಿದ್ದು, ೫ ಕನ್ನಡ ಗಂಡು ಹುಡುಗರವು ಬೇರೆ ಗ್ರಾಮಗಳಲ್ಲಿ, ಅಂತೂ ೬ ದೇಶೀ ಜನರು ಸ್ಥಾಪಿಸಿದ ಶಾಲೆಗಳಿದ್ದವು.

ವಿಜಾಪುರ ಜಿಲ್ಲೆಯಲ್ಲಿ ಸರಕಾರೀ ಮದ್ದತು ದೊರಿಯುವ ಶಾಲೆಗಳು ವೊಟ್ಟಗೆ ೨೫ ಇದ್ದವು. ಅವುಗಳಲ್ಲಿ ೧ ಗಂಡು ಹುಡುಗರದು, ೧ ಹೆಣ್ಣು ಮಕ್ಕಳದು, ಅಂತೂ ೨ ಮಿಶನರೀ ಶಾಲೆಗಳು ಗುಳೆದ ಗುಡ್ಡದಲ್ಲಿ; ಉಳಿದ ೨೩ ಕನ್ನಡ ಗಂಡು ಹುಡುಗರವು ಬೇರೆ ಗ್ರಾಮಗಳಲ್ಲಿ ಇದ್ದವು.

ಕಾನಡಾ ಜಿಲ್ಲೆಯಲ್ಲಿ ಖಾಸಗೀ ಕನ್ನಡ ಗಂಡು ಹುಡುಗರ ಶಾಲೆಗಳು ೮ ಇದ್ದವು. ಆದರೆ ಅವಕ್ಕೆ ಸರಕಾರೀ ಮದ್ದತು ದೊರಿಯುತ್ತಿತ್ತೆಂದು ತೋರುವದಿಲ್ಲ.

ವಿದ್ಯೆಯ ಬೆಳುವಣಿಗೆ.— ಸನ್ ೧೮೨೬ರಲ್ಲಿ ಧಾರವಾಡ ಹುಬ್ಬಳ್ಳಿಗಳಲ್ಲಿ ಮರಾಠೀ ಶಾಲೆಗಳಾದವು. ೧೮೩೦ರಲ್ಲಿ ಬೆಳಗಾವಿಯಲ್ಲಿ ಮರಾಠೀ ಶಾಲೆಯಾಯಿತು; ೧೮೩೫ರಲ್ಲಿ ಧಾರವಾಡ ಹುಬ್ಬಳ್ಳಿಗಳಲ್ಲಿ ವೊಂದೊಂದು ಕನ್ನಡ ಶಾಲೆಗಳಾದವು; ಮುಂದಿನ ವರ್ಷ ರಾಣೀಬಿನ್ನೂರಲ್ಲಿ ಕನ್ನಡ ಶಾಲೆಯಾಯಿತು. ೧೮೩೮ರಲ್ಲಿ ಬೆಳಗಾವಿಯಲ್ಲಿ ಕನ್ನಡ ಶಾಲೆಯಾಯಿತು; ಮುಂದೆ ೨ನೇ ವರ್ಷಕ್ಕೆ ಗೋಕಾವಿಯಲ್ಲಿ ಮರಾಠೀ ಶಾಲೆಯಾಯಿತು. ೧೮೪೮ರಲ್ಲಿ ಧಾರವಾಡದಲ್ಲಿ ಇಂಗ್ಲಿಷ ಶಾಲೆಯಾಯಿತು; ೧೮೫೦ರಲ್ಲಿ ಬೆಳಗಾವಿಯಲ್ಲಿ ಸರದಾರರ ಇಂಗ್ಲಿಷ ಶಾಲೆಯಾಯಿತು. ೧೮೫೩ರಲ್ಲಿ ವಿಜಾಪುರದಲ್ಲಿ ೧ ಕನ್ನಡ, ೧ ಇಂಗ್ಲಿಷ ಶಾಲೆಗಳಾದವು. ೧೮೫೫-೫೬ರಲ್ಲಿ ಧಾರವಾಡ ಜಿಲ್ಲೆಯಲ್ಲಿ ೧ ಇಂಗ್ಲಿಷ, ೧ ನಾರ್ಮಲ ಶಾಲೆ, ೨ ಮರಾಠಿ, ೧೦ ಕನ್ನಡ, ಅಂತೂ ೧೪ ಶಾಲೆಗಳಿದ್ದವು; ಇವುಗಳಲ್ಲೆಲ್ಲ ಕೂಡಿ ರಜಿಷ್ಟರಿನ ಸಂಖ್ಯೆ ೧೮೧೦, ಸರಾಸರೀ ಹಜಿರಿ ೧೨೨೬ ಇತ್ತು; ಆ ವರ್ಷ ಬೆಳಗಾವಿ ಜಿಲ್ಲೆಯಲ್ಲಿಯೂ ಅಷ್ಟೇ ಶಾಲೆಗಳು, ೧ ಇಂಗ್ಲಿಷ, ೨ ಮರಾಠಿ, ೧೧ ಕನ್ನಡ, ಇದ್ದವು; ಅವುಗಳಲ್ಲಿ ರಜಿಷ್ಟರಿನ ಸಂಖ್ಯೆ ೧೮೯೮, ಸರಾಸರೀ ಹಜಿರಿ ೧೩೨೦ ಇತ್ತು; ಆ ವರ್ಷ ವಿಜಾಪುರ ಜಿಲ್ಲೆಯಲ್ಲಿ ೧ ಇಂಗ್ಲಿಷ, ೮ ಕನ್ನಡ ಶಾಲೆಗಳಿದ್ದವು; ಅವುಗಳಲ್ಲಿ ರಜಿಷ್ಟರಿನ ಸಂಖ್ಯೆ ೩೯೫, ಸರಾಸರೀ ಹಜಿರಿ ೩೦೫ ಇತ್ತು. ಇದೇ ಸಂಧಿಯಲ್ಲಿ ಪುಣೆಯಿಂದ ವಿಝುಟರನೆಂಬ ಅಧಿಕಾರಿಯು ದಕ್ಷಿಣ ಮಹಾರಾಷ್ಟ್ರದ ಶಾಲೆಗಳನ್ನು ತಪಾಸಿಸಲಿಕ್ಕೆ ಬರ ಹತ್ತಿದನು. ಮುಂದೆ ಯೆರಡು ವರ್ಷದೊಳಗೆ ದಕ್ಷಿಣ ಭಾಗಕ್ಕೆ ಸ್ವತಂತ್ರವಾಗಿ ವೊಬ್ಬ ಇನ್‌ಸ್ಪೆಕ್ಟರನನ್ನು ನೇಮಿಸಿ, ಅವನ ಕೈಕೆಳಗೆ ದೇಶ ಭಾಷೆಯ ಶಾಲೆಗಳ ತಪಾಸಣಿಗಾಗಿ ವೊಬ್ಬ ಡೆಪ್ಯುಟೀ ಇನ್‌ಸ್ಪೆಕ್ಟರನನ್ನು ನೇಮಿಸಿದರು. ಮುಂದೆ ಸನ್ ೧೮೬೩ರ ಸುಮಾರಿನಲ್ಲಿ ನಾಲ್ಕೂ ಜಿಲ್ಲೆಗಳಿಗೆ ಬೇರೆ ಬೇರೆ ಡೆಪ್ಯುಟೀ ಇನ್‌ಸ್ಪೆಕ್ಟರರನ್ನು ನೇಮಿಸಿದರು. ಸನ್ ೧೮೬೫-೬೬ರಲ್ಲಿ ನಾಲ್ಕೂ ಜಿಲ್ಲೆಗಳಲ್ಲಿ ಶಾಲೆಗಳ ಸಂಖ್ಯೆ ಹ್ಯಾಗಂದರೆ— ಧಾರವಾಡ, ವೊಟ್ಟು ಶಾಲೆಗಳು ೯೯, ವಿದ್ಯಾರ್ಥಿಗಳು ೪೨೩೭, ಸರಾಸರೀ ಹಜಿರಿ ೩೯೯೧; ಬೆಳಗಾವಿ, ವೊಟ್ಟು ಶಾಲೆಗಳು ೫೬, ವಿದ್ಯಾರ್ಥಿಗಳು ೪೩೮೦, ಸರಾಸರೀ ಹಜಿರಿ ೩೮೧೨;

ವಿಜಾಪುರ, ವೊಟ್ಟು ಶಾಲೆಗಳು ೪೬, ವಿದ್ಯಾರ್ಥಿಗಳು ೨೮೭೭, ಸರಾಸರೀ ಹಜಿರಿ ೨೨೬೫; ಕಾನಡಾ, ವೊಟ್ಟು ಶಾಲೆಗಳು ೧೧, ವಿದ್ಯಾರ್ಥಿಗಳು ೮೩೦. ಕಾನಡಾ ಜಿಲ್ಲೆಯು ಸನ್ ೧೮೬೨ರಲ್ಲಿ ಮುಂಬಯಿ ಇಲಾಖೆಗೆ ಶೇರುವ ವರೆಗೆ ಆ ಜಿಲ್ಲೆಯಲ್ಲಿ ಸರಕಾರೀ ಶಾಲೆಗಳು ಆಗಿದ್ದಿಲ್ಲೆಂದು ತೋರುತ್ತದೆ.

ಸ್ತ್ರೀ ಶಿಕ್ಷಣದ ಬೆಳುವಣಿಗೆ.—ಎಲ್ಲಕ್ಕೂ ಮೊದಲು ಸನ್ ೧೮೫೪ರಲ್ಲಿ ಮಿಶನರೀ ಕೀ ಸಾಹೇಬರು ಗುಳೇದ ಗುಡ್ಡದಲ್ಲಿ ಹೆಣ್ಣು ಹುಡುಗರ ಶಾಲೆಯನ್ನು ಸ್ಥಾಪಿಸಿದರು. ಅದರ ಹೊರ್ತು ಸನ್ ೧೮೬೬-೬೭ರ ವರೆಗೆ ಯೆಲ್ಲಿಯೂ ಹೆಣ್ಣು ಮಕ್ಕಳ ಶಾಲೆ ಇದ್ದಿಲ್ಲ. ಆ ವರ್ಷ ಉಳಿದ ಮೂರು ಜಿಲ್ಲೆಗಳಲ್ಲಿ ಹೆಣ್ಣು ಮಕ್ಕಳ ಶಾಲೆಗಳು ಆರಂಭವಾಗಿ ಮುಂದೆ ಬೆಳಿಯುತ್ತ ಬಂದದ ವಿವರ ಹ್ಯಾಗಂದರೆ— ಧಾರವಾಡ, ಸನ್ ೧೮೬೭ರಲ್ಲಿ ೧ ಶಾಲೆ; ಸನ್ ೧೮೭೩-೭೪ರಲ್ಲಿ ೧೧ ಶಾಲೆಗಳು, ಅವುಗಳಲ್ಲಿ ರಜಿಷ್ಟರಿನ ಸಂಖ್ಯೆ ೪೨೭, ಸರಾಸರೀ ಹಜಿರಿ ೨೯೫. ಸನ್ ೧೮೮೦ರಲ್ಲಿ ೩ ಮಿಶನರೀ, ೨ ಜಹಾಗೀರ ಇಲಾಖೆಗಳಲ್ಲಿ, ೧೫ ಸರಕಾರೀ ಅಂತೂ ೨೦ ಶಾಲೆಗಳು; ಸನ್ ೧೮೮೨-೮೩ರಲ್ಲಿ ೩ ಮಿಶನರಿ, ೬ ಜಹಾಗೀರ ಇಲಾಖೆಗಳಲ್ಲಿ, ೧೭ ಸರಕಾರೀ, ಅಂತೂ ೨೬ ಶಾಲೆಗಳು, ಅವುಗಳಲ್ಲಿ ರಜಿಷ್ಟರಿನ ಸಂಖ್ಯೆ ೧೮೬೯; ಈ ಶಾಲೆಗಳಲ್ಲದೆ ಗಂಡು ಹುಡುಗರ ಶಾಲೆಗಳಲ್ಲಿ ವೊಟ್ಟಿಗೆ ೨೪೫೦ ಜನ ಹೆಣ್ಣು ವಿದ್ಯಾರ್ಥಿಗಳು ಕಲಿಯುತ್ತಿದ್ದರು; ಆದ್ದರಿಂದ ವೊಟ್ಟಿಗೆ ಧಾರವಾಡ ಜಿಲ್ಲೆಯಲ್ಲಿ ೨೬ ಶಾಲೆಗಳೂ ೪೩೧೯ ವಿದ್ಯಾರ್ಥಿನಿಯರೂ ಇದ್ದರು. ಬೆಳಗಾವೀ ಜಿಲ್ಲೆಯಲ್ಲಿ ಸನ್ ೧೮೬೭ರಲ್ಲಿ ೨ ಶಾಲೆಗಳು ಆರಂಭವಾದವು; ಸನ್ ೧೮೭೩-೭೪ರಲ್ಲಿ ೭ ಶಾಲೆಗಳಿದ್ದವು, ಅವುಗಳಲ್ಲಿ ರಜಿಷ್ಟರಿನ ಸಂಖ್ಯೆ ೨೬೭, ಸರಾಸರೀ ಹಜಿರಿ ೧೮೧ ಇತ್ತು; ಸನ್ ೧೮೮೨-೮೩ರಲ್ಲಿ ೯ ಶಾಲೆಗಳಿದ್ದವು, ಅವುಗಳಲ್ಲಿ ರಜಿಷ್ಟರಿನ ಸಂಖ್ಯೆ ೫೧೨, ಸರಾಸರೀ ಹಜಿರಿ ೨೫೨ ಇತ್ತು. ವಿಜಾಪುರ ಜಿಲ್ಲೆಯಲ್ಲಿ ಮೇಲೆ ಹೇಳಿದ ಗುಳೇದ ಗುಡ್ಡದ ಶಾಲೆಯ ನಂತರ ಸನ್ ೧೮೬೯ರಲ್ಲಿ ಅದು ಸಹಿತ ೩ ಶಾಲೆಗಳಿದ್ದವು; ಸನ್ ೧೮೭೩-೭೪ರಲ್ಲಿ ೧೦ ಶಾಲೆಗಳಿದ್ದವು, ಅವುಗಳಲ್ಲಿ ರಜಿಷ್ಟರಿನ ಸಂಖ್ಯೆ ೩೯೧, ಸರಾಸರೀ ಹಜಿರಿ ೩೧೯ ಇತ್ತು; ಸನ್ ೧೮೮೨-೮೩ರಲ್ಲಿ ೮ ಶಾಲೆಗಳಿದ್ದವು, ಅವುಗಳಲ್ಲಿ ರಜಿಷ್ಟರಿನ ಸಂಖ್ಯೆ ೨೯೭, ಸರಾಸರೀ ಹಜಿರಿ ೧೮೫ ಇತ್ತು. ಕಾನಡಾ ಜಿಲ್ಲೆಯಲ್ಲಿ ಸನ್ ೧೮೬೭ರಲ್ಲಿ ೨ ಶಾಲೆಗಳಾರಂಭವಾದವು; ಸನ್ ೧೮೭೨-೭೩ರಲ್ಲಿ ೮ ಶಾಲೆಗಳಿದ್ದವು, ಅವುಗಳಲ್ಲಿ ರಜಿಷ್ಟರಿನ ಸಂಖ್ಯೆ ೧೬೯, ಸರಾಸರೀ ಹಜಿರಿ ೧೨೨ ಇತ್ತು; ಸನ್ ೧೮೮೧-೮೨ರಲ್ಲಿ ನಾಲ್ಕೇ ಶಾಲೆಗಳಿದ್ದು, ಅವುಗಳಲ್ಲಿಯ ರಜಿಷ್ಟರಿನ ಸಂಖ್ಯೆ ೨೦೮, ಸರಾಸರೀ ಹಜಿರಿ ೧೪೭ ಇತ್ತು.

ಓದು ಬರಹ ಬಲ್ಲವರೂ ಅರಿಯದವರೂ.—ಹಿಂದೂ ಮುಸಲ್ಮಾನ, ಕ್ರಿಸ್ತಿ, ಈ ಮೂರು ಜನಾಂಗಗಳಲ್ಲಿ ನಾಲ್ಕೂ ಜಿಲ್ಲೆಗಳಲ್ಲಿ ಓದು ಬರಹ ಬಲ್ಲವರ ಸಂಖ್ಯೆಗಳನ್ನೂ ಅರಿಯದವರ ಸಂಖ್ಯೆಗಳನ್ನೂ ಕೆಳಗಿನ ಕೋಷ್ಟಕದಲ್ಲಿ ವಿವರಿಸಿದ್ದೇವೆ.

| | ಹಿಂದೂ ಶೇಕಡಾ. | | | ಮುಸಲ್ಮಾನರು ಶೇಕಡಾ. | | | ಕ್ರಿಸ್ತೀ ಶೇಕಡಾ. | | | ಒಟ್ಟು ಶೇಕಡಾ. | | |
|---|---|---|---|---|---|---|---|---|---|---|---|---|
| | ಕಲಿಯುವವರು. | ಕಲಿತವರು. | ಕಲಿಯದವರು. | ಕಲಿಯುವವರು. | ಕಲಿತವರು. | ಕಲಿಯದವರು. | ಕಲಿಯುವವರು. | ಕಲಿತವರು. | ಕಲಿಯದವರು. | ಕಲಿಯುವವರು. | ಕಲಿತವರು. | ಕಲಿಯದವರು. |
| ಧಾರವಾಡ . . . . . . | ೨·೨೯ | ೩·೮೪ | ೯೩·೮೭ | ೧·೬೧ | ೨·೦೨ | ೯೬·೩೭ | ೧೩·೪೫ | ೧೨·೭೨ | ೭೩·೮೩ | ೫·೭೮ | ೬·೧೯ | ೮೮·೩೦ |
| ಬೆಳಗಾವಿ . . . . . . | ೧·೫೪ | ೨·೮೪ | ೯೫·೬೨ | ೧·೫೪ | ೨·೨೭ | ೯೬·೧೯ | ೩·೬೭ | ೧೮·೪೬ | ೭೭·೮೭ | ೨·೨೫ | ೭·೮೬ | ೮೯·೮೯ |
| ವಿಜಾಪುರ . . . . . . | ೧·೪೧ | ೨·೯೨ | ೯೫·೬೭ | ೦·೯೧ | ೧·೩೯ | ೯೭·೭೦ | ೯·೭೬ | ೧೩·೭೬ | ೭೬·೪೮ | ೪·೦೩ | ೬·೦೩ | ೮೯·೯೪ |
| ಕಾನಡಾ . . . . . . | ೧·೬೨ | ೪·೭೩ | ೯೩·೬೫ | ೨·೯೮ | ೫·೩೨ | ೯೧·೭೦ | ೨·೨೨ | ೩·೬೫ | ೯೪·೧೩ | ೨·೨೭ | ೪·೪೦ | ೯೩·೩೩ |
| | ೧·೭೧ | ೩·೫೮ | ೯೪·೭೧ | ೧·೭೬ | ೨·೭೫ | ೯೫·೪೯ | ೭·೨೭ | ೧೨·೧೫ | ೮೦·೫೮ | ೩·೫೮ | ೬·೧೨ | ೯೦·೧೦ |

## ಶಾಲೆಗಳು, ವಿದ್ಯಾರ್ಥಿಗಳು, ಫೀ, ಖರ್ಚು—೧೮೮೨-೮೩ (ಕಾನಡಾ ೧೮೮೧-೮೨).

### ಧಾರವಾಡ.

| ಹೆಸರು. | ಶಾಲೆಗಳ ಸಂಖ್ಯೆ. | ವಿದ್ಯಾರ್ಥಿಗಳು. | | | | ಸರಾಸರಿ ಹಾಜರಿ. | ಒಬ್ಬನಿಗೆ ಖರ್ಚು. | ಫೀ ವಸೂಲು. | ಖರ್ಚಿನ ಬಾಬುಗಳು. | | | | ಖರ್ಚಿನ ಹಣ ಬಂದದ್ದರ ವಿವರ. | | | |
|---|---|---|---|---|---|---|---|---|---|---|---|---|---|---|---|---|
| | | ಹಿಂದು. | ಮುಸಲಮಾನ. | ಇತರ. | ಒಟ್ಟು. | | | | ಪಗಾರ. | ಬಾಂಧಕಾಮ. | ಸಾಹಿತ್ಯ. | ಒಟ್ಟು. | ಸರಕಾರ. | ಲೋಕಲ್ ಫಂಡು. | ಫೀ ಮುಂತಾದದ್ದು. | ಒಟ್ಟು. |
| ಟ್ರೇನಿಂಗ ಕಾಲೇಜ .. | ೧ | ೯೪ | ೧೩ | .. | ೧೦೭ | ೯೨.೭ | ೧೬೩-೧-೪ | .. | ೭೫೧೦ | .. | ೭೬೨೦ | ೧೫೧೩೦ | ೮೨೫೦ | ೬೨೮೦ | .. | ೧೫೧೩೦ |
| ಹಾಯಸ್ಕೂಲು .... | ೧ | ೧೯೪ | ೨ | ೨ | ೧೯೮ | ೧೧೫ | ೮೬-೧-೪ | ೩೦೮೦ | ೮೯೫೦ | .. | ೧೪೫೦ | ೧೦೪೦೦ | ೬೧೩೦ | ೧೧೮೦ | ೩೦೯೦ | ೧೦೪೦೩ |
| ಆಂಗ್ಲೊವರ್ನ್ಯಾಕ್ಯುಲರ | ೧೦ | ೪೩೧ | ೧೫ | ೩ | ೪೪೯ | ೩೪೪ | ೧೮-೮-.. | ೨೮೧೦ | ೯೨೮೦ | .. | ೧೦೦ | ೬೩೮೦ | ೧೮೭೦ | ೧೦೦ | ೪೪೧೦ | ೬೩೮೩ |
| ದೇಶ ಭಾಷೆಯವು.. | ೩೪೧ | ೨೫೪೭೦ | ೩೨೩೧ | ೩೬ | ೨೮೭೩೭ | ೧೮೪೬೬ | ೫-೪-೮ | ೧೬೭೧೦ | ೮೭೦೧೦ | ೧೧೨೬೦ | .. | ೯೮೨೭೦ | ೧೬೪೩೦ | ೬೫೦೯೦ | ೧೬೭೫೦ | ೯೮೨೭೦ |
| ಉದ್ಯೋಗ ಶಾಲೆ... | ೧ | ೩೪ | ೨೧ | ೧ | ೫೬ | ೪೪.೨ | ೬೦೭-೮-೮ | ,, | ೮೦೩೦ | ,, | ೧೧೬೦ | ೯೧೯೦ | ೧೫೦೦ | ೫೧೦ | ೭೧೮೦ | ೯೧೯೦ |
| ಪೋಲೀಸ, ತುರಂಗ.. | ೨ | ೮೦ | ೮೨ | ೨ | ೧೬೪ | ೧೪೪ | .. | .. | .. | .. | ,, | ,, | ,, | ,, | .. | .. |
| | ೩೫೬ | ೨೬೩೦೩ | ೩೩೬೪ | ೪೪ | ೨೯೭೧೧ | ೧೯೧೦೫.೯ | | ೨೨೬೦೦ | ೧೧೭೭೮೦ | ೧೧೨೬೦ | ೧೦೩೩೦ | ೧೩೯೩೭೦ | ೩೪೭೮೦ | ೭೩೧೬೦ | ೩೧೪೩೦ | ೧೩೯೩೭೦ |

## ಬೆಳಗಾವಿ.

| ಹೆಸರು. | ಶಾಲೆಗಳ ಸಂಖ್ಯೆ. | ವಿದ್ಯಾರ್ಥಿಗಳು. | | | | ಸರಾಸರಿ ಹಾಜರಿ. | ಆಸಾಮಿಗೆ ಖರ್ಚು. | ಫೀ ವಸೂಲು. | ಖರ್ಚಿನ ಬಾಬುಗಳು. | | | | ಖರ್ಚಿನ ಹಣ ಬಂದದ್ದರ ವಿವರ. | | | |
|---|---|---|---|---|---|---|---|---|---|---|---|---|---|---|---|---|
| | | ಹಿಂದು. | ಮುಸಲಮಾನ. | ಪಾರಸಿ. | ಒಟ್ಟು. | | | | ಪಗಾರ. | [illegible] | [illegible] | ಒಟ್ಟು. | ಸರಕಾರ. | ಲೋಕಲ್ ಫಂಡು. | ಹಿಡಿ. ಫೀ. ಮುಂತಾದದ್ದು. | ಒಟ್ಟು. |
| ಹಾಯಸ್ಕೂಲು .... | ೧ | ೧೪೫ | .. | ೭ | ೧೫೨ | ೧೪೩ | ೯೮-೫-೪ | ೨೯೬೦ | ೧೨೯೫೦ | .. | ೧೧೬೦ | ೧೪೧೧೦ | ೮೨೮೦ | ೫೦೦ | ೫೩೪೦ | ೧೪೧೨೦ |
| ಆಂಗ್ಲೊವರ್ನ್ಯಾಕ್ಯುಲರ | ೯ | ೩೨೨ | ೧೩ | ೬ | ೩೪೧ | ೨೪೭ | ೧೮-೨-,, | ೧೪೩೦ | ೪೪೮೦ | .. | .. | ೪೪೮೦ | ೧೨೪೦ | .. | ೩೨೪೦ | ೪೪೮೦ |
| ದೇಶ ಭಾಷೆಯವು .. | ೧೭೭ | ೧೪೦೨೫ | ೧೭೯೪ | ೬೮ | ೧೫೮೮೭ | ೧೦೦೮೦೦ | ೬-೨-,, | ೨೯೨೦ | ೫೦೭೩೦ | ೧೧೩೬೦ | .. | ೬೨೦೯೦ | ೧೩೨೪೦ | ೩೮೫೧೦ | ೯೮೪೦ | ೬೨೦೯೦ |
| | ೧೮೭ | ೧೪೪೯೨ | ೧೮೦೭ | ೮೧ | ೧೬೩೮೦ | ೧೦೪೭೦ | | ೧೪೩೧೦ | ೬೮೧೬೦ | ೧೧೩೬೦ | ೧೧೬೦ | ೮೦೬೮೦ | ೨೨೮೬೦ | ೩೯೦೧೦ | ೧೮೯೨೦ | ೮೦೬೮೦ |

## ವಿಜಾಪುರ.

| ಹೆಸರು. | ಶಾಲೆಗಳ ಸಂಖ್ಯೆ. | ಹಿಂದು. | ಮುಸಲಮಾನ. | ಪಾರಸಿ. | ಒಟ್ಟು. | ಸರಾಸರಿ ಹಾಜರಿ. | ಆಸಾಮಿಗೆ ಖರ್ಚು. | ಫೀ ವಸೂಲು. | ಪಗಾರ. | [illegible] | [illegible] | ಒಟ್ಟು. | ಸರಕಾರ. | ಲೋಕಲ್ ಫಂಡು. | ಹಿಡಿ. ಫೀ. ಮುಂತಾದದ್ದು. | ಒಟ್ಟು. |
|---|---|---|---|---|---|---|---|---|---|---|---|---|---|---|---|---|
| ಆಂಗ್ಲೊವರ್ನ್ಯಾಕ್ಯುಲರ | ೬ | ೨೦೦ | ೮ | ೨ | ೨೧೬ | ೧೫೭.೧ | ೨೭-೮-,, | ೧೫೪೦ | ೩೬೬೦ | ,, | ೬೬೦ | ೪೩೨೦ | ೧೬೯೦ | ೫೭೦ | ೨೦೬೦ | ೪೩೨೦ |
| ದೇಶ ಭಾಷೆಯವು .. | ೧೫೦ | ೮೮೪೦ | ೧೧೨೪ | ೭ | ೯೯೭೧ | ೭೪೭೨.೯ | ೭-೧೨-೮ | ೬೬೩೦ | ೪೨೬೩೦ | ೧೩೪೬೦ | ೨೨೦೦ | ೫೮೨೯೦ | ೧೨೧೮೦ | ೩೯೨೭೦ | ೬೮೪೦ | ೫೮೨೯೦ |
| | ೧೫೬ | ೯೦೪೦ | ೧೧೩೨ | ೯ | ೧೦೦೮೧ | ೭೬೩೦ | | ೮೧೭೦ | ೪೬೨೯೦ | ೧೩೪೬೦ | ೨೮೬೦ | ೬೨೬೧೦ | ೧೩೮೭೦ | ೩೯೮೪೦ | ೮೯೦೦ | ೬೨೬೧೦ |

## ಕಾನಡಾ.

| ಹೆಸರು. | ಶಾಲೆಗಳ ಸಂಖ್ಯೆ. | ಹಿಂದು. | ಮುಸಲಮಾನ. | ಪಾರಸಿ. | ಒಟ್ಟು. | ಸರಾಸರಿ ಹಾಜರಿ. | ಆಸಾಮಿಗೆ ಖರ್ಚು. | ಫೀ ವಸೂಲು. | ಪಗಾರ. | [illegible] | [illegible] | ಒಟ್ಟು. | ಸರಕಾರ. | ಲೋಕಲ್ ಫಂಡು. | ಹಿಡಿ. ಫೀ. ಮುಂತಾದದ್ದು. | ಒಟ್ಟು. |
|---|---|---|---|---|---|---|---|---|---|---|---|---|---|---|---|---|
| ಹಾಯಸ್ಕೂಲು .... | ೧ | ೪೬ | ೧ | ೯ | ೫೬ | ೫೩.೦೭ | ೧೦೧-೧೧-೪ | ೧೬೮೦ | ೫೬೩೦ | ,, | ೮೦ | ೫೭೧೦ | ೪೦೩೦ | ,, | ೧೬೮೦ | ೫೭೧೦ |
| ಆಂಗ್ಲೊವರ್ನ್ಯಾಕ್ಯುಲರ | ೫ | ೬೨೫ | ೨೩ | ೪೬ | ೬೯೪ | ೧೩೨.೩೭ | ೨೧- ೯-೪ | ೮೫೦ | ೪೧೩೦ | ,, | ,, | ೪೧೩೦ | ೯೧೦ | ,, | ೩೨೨೦ | ೪೧೩೦ |
| ದೇಶ ಭಾಷೆಯವು .. | ೧೦೦ | ೪೩೩೪ | ೮೧೯ | ೬೦೮ | ೫೭೬೧ | ೪೧೩೩.೭೦ | ೧೨-೧೦-,, | ೨೩೦೦ | ೨೫೭೬೦ | ೫೬೬೦ | ೫೦೦ | ೩೧೯೨೦ | ೯೧೬೦ | ೨೦೦೧೦ | ೨೫೪೦ | ೩೧೭೧೦ |
| | ೧೦೬ | ೫೦೦೫ | ೮೪೩ | ೬೬೩ | ೬೫೧೧ | ೪೩೧೯.೧೪ | | ೪೭೬೦ | ೩೫೫೨೦ | ೫೬೬೦ | ೫೮೦ | ೪೧೭೬೦ | ೧೪೧೦೦ | ೨೦೦೧೦ | ೭೪೪೦ | ೪೧೫೫೦ |
| | ೭೯೫ | ೫೪೮೪೦ | ೭೧೪೮ | ೭೯೨ | ೬೨೭೮೪ | ೪೧೫೩೫.೦೪ | | ೪೯೮೪೦ | ೨೬೭೧೫೦ | ೪೧೭೪೦ | ೧೪೯೩೦ | ೩೨೩೮೨೦ | ೮೬೫೧೦ | ೧೭೨೦೭೦ | ೬೫೬೯೦ | ೩೨೪೨೭೦ |

ಗ್ರಾಮ್ಯ ಶಾಲೆಗಳು.— ಸದರೀ ಸರಕಾರೀ ಶಾಲೆಗಳ ಹೊರ್ತು ಸರಕಾರದ ಸಂಬಂಧವಿಲ್ಲದಂಥ ಗ್ರಾಮ್ಯ ಶಾಲೆಗಳು ಯೆಲ್ಲ ಕಡೆಯಲ್ಲಿ ಬಹು ದಿವಸದಿಂದ ನಡಿಯುತ್ತವೆ. ಈ ಶಾಲೆಗಳಲ್ಲಿ ಛಾಪೀ ಪುಸ್ತಕಗಳನ್ನೂ ಕೈ ಬರಹದ ಕಾಗದಗಳನ್ನೂ ಓದುವದು, ಖರಡು ಬರಿಯುವದು, ತ್ರೈರಾಶಿಕದ ಅಥವಾ ಸರಳ ಬಡ್ಡಿಯ ವರೆಗೆ ಅಂಕಗಣಿತ, ಬಾಯಿ ಲೆಕ್ಕ, ಇಷ್ಟರ ಹೊರ್ತು ಬಹುತರ ಹೆಚ್ಚಿಗೇನು ಕಲಿಸುವದಿಲ್ಲ. ಹುಡುಗರು ೨ ಆಣೆಯಿಂದ ೪ ಆಣೆಯ ವರೆಗೆ ಮಾಸ್ತರನಿಗೆ ಫೀ ಕೊಡುತ್ತಾರೆ. ಅದೇ ಮಾಸ್ತರನ ಮುಖ್ಯ ಆದಾಯ; ಅದರ ಹೊರ್ತು ಹಲಗೀ ಪೂಜೇಯ ದಿವಸ (ಚತುರ್ದಶಿ) ವೊಂದು ದುಡ್ಡು, ಸಂತೆಯ ದಿವಸ ಕೆಲವು ಕಾಳು, ಮಾಸ್ತರನಿಗೆ ದೊರಿಯುವದುಂಟು. ಇದಲ್ಲದೆ ಮಾಸ್ತರನು ವಿದ್ಯಾರ್ಥಿಗಳ ಮನೆಗೆ ವಾರ ಹಚ್ಚಿಕೊಂಡು ಊಟಕ್ಕೆ ಹೋಗುತ್ತಿರುತ್ತಾನೆ. ವಾಡಿಕೆಯಾಗಿ ಯೆರಡನೇ ಯಾವ ಹೋರೆಯನ್ನು ಮಾಡಲಾರದಂಥವರು ಈ ಶಾಲೆಗಳನ್ನು ಹಾಕುತ್ತಾರೆ. ಆದರೂ ತಿಳುವಳಿಕೆಯ ಮನುಷ್ಯನಿಗೆ ಈ ಬಗೆಯ ಶಾಲೆಯಿಂದ ಬಡತನದ ರೀತಿಯಿಂದ ಅವನ ಕುಟುಂಬದ ಯೋಗಕ್ಷೇಮವಾಗುವಷ್ಟು ಆದಾಯವಾಗುತ್ತದೆ. ಆದರೆ ಹಳ್ಳಿಗಳಲ್ಲಿ ಸರಕಾರೀ ಶಾಲೆಗಳಾದ ಹಾಗೆ ಈ ಗ್ರಾಮ್ಯ ಶಾಲೆಗಳು ದಿನದಿನಕ್ಕೆ ಕಡಿಮೆಯಾಗುತ್ತ ನಡಿದವು.

ವರ್ತಮಾನ ಪತ್ರಗಳು.— ಸನ್ ೧೮೪೭-೭೩ನೇ ವರ್ಷದಲ್ಲಿ ಧಾರವಾಡದಲ್ಲಿ ಧಾರವಾಡ ವೃತ್ತ, ಚಂದ್ರೋದಯ, ಛಾವಾ, ಯೆಂಬ ಮೂರು ವರ್ತಮಾನ ಪತ್ರಗಳಿದ್ದವು. ಧಾರವಾಡವೃತ್ತದ ೪೫೦ ಪ್ರತಿಗಳು ಗುರುವಾರ ಹೊರಡುತ್ತಿದ್ದವು; ಚಂದ್ರೋದಯದ ೧೫೦ ಪ್ರತಿಗಳು ಶನಿವಾರ ಹೊರಡುತ್ತಿದ್ದವು; ಛಾವಾ ಪತ್ರದ ಸ್ವಲ್ಪ ಪ್ರತಿಗಳು ರವಿವಾರ ಹೊರಟು ಬಹುತರ ಧಾರವಾಡದ ಹೊರಗೆ ಹೋಗುತ್ತಿದ್ದಿಲ್ಲ.

ಬೆಳಗಾವಿಯಲ್ಲಿ ಸದರೀ ವರ್ಷ ಬೆಳಗಾವ ಸಮಾಚಾರವೆಂಬ ಪತ್ರದ ೨೫೦ ಪ್ರತಿಗಳು ಸೋಮವಾರ ಹೊರಡುತ್ತಿದ್ದವು; ಕರ್ನಾಟಕ ಮಿತ್ರವೆಂಬ ಪತ್ರದ ೧೫೦ ಪ್ರತಿಗಳು ಬುಧವಾರ ಹೊರಡುತ್ತಿದ್ದವು; ಜ್ಞಾನಬೋಧಕವೆಂಬ ಪತ್ರದ ೧೫೦ ಪ್ರತಿಗಳು ರವಿವಾರ ಹೊರಡುತ್ತಿದ್ದವು.

ಸದರೀ ವರ್ಷ ಕಲಾದಗಿಯಲ್ಲಿ ಹಿತೇಚ್ಛುವೆಂಬ ಪತ್ರದ ೪೫ ಪ್ರತಿಗಳು ರವಿವಾರ ಹೊರಡುತ್ತಿದ್ದವು. ಈ ಪತ್ರವು ೧೩ ವರ್ಷದ ಪೂರ್ವದಿಂದ ಹೊರಡುತ್ತಿತ್ತು.

ಕಾನಡಾ ಜಿಲ್ಲೆಯಲ್ಲಿ ಸದರೀ ವರ್ಷದಲ್ಲಿ ವರ್ತಮಾನ ಪತ್ರವೇ ಇದ್ದಿಲ್ಲ.

ಪುಸ್ತಕಾಲಯಗಳೂ ವಾಚನಗೃಹಗಳೂ.— ಧಾರವಾಡ ಜಿಲ್ಲೆಯಲ್ಲಿ ಸದರೀ ವರ್ಷದಲ್ಲಿ ಧಾರವಾಡ, ಹುಬ್ಬಳ್ಳಿ, ರಾಣೀಬಿನ್ನೂರು, ಈ ಮೂರು ಗ್ರಾಮಗಳಲ್ಲಿ ಪುಸ್ತಕಾಲಯಗಳೂ, ಗದಗು, ಹಾವೇರಿ, ನವಲಗುಂದ, ನರಗುಂದ, ಈ ನಾಲ್ಕು ಗ್ರಾಮಗಳಲ್ಲಿ ವಾಚನಗೃಹಗಳೂ ಇದ್ದವು. ಇವು ಕ್ರಮವಾಗಿ ಸನ್ ೧೮೫೪, ೧೮೬೫, ೧೮೭೩, ೧೮೭೭, ೧೮೪೦, ೧೮೭೩, ೧೮೭೨ ಈ ವರ್ಷಗಳಲ್ಲಿ ವುಂಟಾದವು. ಧಾರವಾಡದ ಪುಸ್ತಕಾಲಯವು

ಯೆಲ್ಲಕ್ಕೂ ದೊಡ್ಡದೆನಿಸುತ್ತದೆ. ಆದರೂ ಆಶ್ರಯವಿಲ್ಲದ್ದರಿಂದ ಅದು ಆಗಾಗ್ಗೆ ಲಯ ಹೊಂದುವ ಸ್ಥಿತಿಗೆ ಬರುತ್ತಿರುತ್ತವೆ.

ಬೆಳಗಾವೀ ಜಿಲ್ಲೆಯಲ್ಲಿ ೨ ಪುಸ್ತಕಾಲಯಗಳೂ ೭ ವಾಚನಗೃಹಗಳೂ ಇದ್ದವು. ಬೆಳಗಾವಿಯಲ್ಲಿಯ ೨ ಪುಸ್ತಕಾಲಯಗಳು ಸನ್ ೧೮೪೮ರಲ್ಲಿ ಹುಟ್ಟಿದವು; ಉಳಿದ ೭ ವಾಚನಗೃಹಗಳು ಚಿಕ್ಕೋಡಿ, ನಿಪಾಣಿ, ಗೋಕಾವಿ, ಅಥಣಿ, ಸಂಪಗಾವಿ, ಖಾನಾಪುರ, ಸವದತ್ತಿಗಳಲ್ಲಿ ಕ್ರಮವಾಗಿ ೧೮೬೬, ೧೮೬೫, ೧೮೬೫, ೧೮೬೬, ೧೮೭೦ ಈ ವರ್ಷಗಳಲ್ಲಿ ಆರಂಭವಾದವು.

ವಿಜಾಪುರ ಜಿಲ್ಲೆಯಲ್ಲಿ ಸದರೀ ವರ್ಷದಲ್ಲಿ ಬಾಗಲಕೋಟೆ, ಬಾಗೇವಾಡಿ, ಬೀಳಗಿ, ವಿಜಾಪುರ, ಇಂಡಿ, ಕಲಾದಗಿ, ಮುದ್ದೇಬಿಹಾಳಗಳಲ್ಲಿ ಪುಸ್ತಕಾಲಯಗಳು ಅಥವಾ ವಾಚನಗೃಹಗಳು ಇದ್ದವು.

ಕಾನಡಾ ಜಿಲ್ಲೆಯಲ್ಲಿ ಸನ್ ೧೮೮೧-೮೨ರಲ್ಲಿ ಕಾರವಾಡ (೧೮೬೪), ಶಿರಸಿ (೧೮೭೦), ಕುಮಟಾ (೧೮೭೫), ಹಲ್ಯಾಳ, ಈ ನಾಲ್ಕು ಗ್ರಾಮಗಳಲ್ಲಿ ಪುಸ್ತಕಾಲಯಗಳಿದ್ದವು. ಕಾರವಾಡದ ಪುಸ್ತಕಾಲಯದಲ್ಲಿ ಪದಾರ್ಥ ಸಂಗ್ರಹಾಲಯವೂ ಇರುತ್ತದೆ. ಈ ಪುಸ್ತಕಾಲಯದಲ್ಲಿ ಸದರೀ ವರ್ಷ ೧೭೦೯ ಪುಸ್ತಕಗಳಿದ್ದವು. ಆದ್ದರಿಂದ ಕಾರವಾಡದ ಪುಸ್ತಕಾಲಯವು ನಾಲ್ಕೂ ಜಿಲ್ಲೆಗಳಲ್ಲಿ ಮೇಲಾದದ್ದೆಂದು ಹೇಳಬಹುದು.

ಧಾರವಾಡ ಹುಬ್ಬಳ್ಳಿಗಳಲ್ಲಿ ವೊಂದೊಂದು ಹೊಲಿಯರ ಶಾಲೆಗಳುಂಟು. ಮೊದಲನೇದರಲ್ಲಿ ೧೫೦ ಜನ ವಿದ್ಯಾರ್ಥಿಗಳೂ ಯೆರಡನೇದರಲ್ಲಿ ೫೦ ಜನ ವಿದ್ಯಾರ್ಥಿಗಳೂ ಸದರೀ ವರ್ಷದಲ್ಲಿ ಕಲಿಯುತ್ತಿದ್ದರು. ಈ ಶಾಲೆಗಳಲ್ಲದೆ ಧಾರವಾಡ ಜಿಲ್ಲೆಯಲ್ಲಿ ವೊಟ್ಟಿಗೆ ೧೫೦ ಜನ ನೀಚ ಜಾತಿಗಳ ಹುಡುಗರು ಉತ್ತಮರ ಶಾಲೆಗಳಲ್ಲಿ ಬೇರೆ ಕೂತು ಸದರೀ ವರ್ಷದಲ್ಲಿ ಕಲಿಯುತ್ತಿದ್ದರು.

# ೧೨ನೇ ಭಾಗ.

## ಆರೋಗ್ಯವು.

ರೋಗಗಳು.—ಧಾರವಾಡ ಜಿಲ್ಲೆಯ ಹವೆಯು ವಾಡಿಕೆಯಾಗಿ ಆರೋಗ್ಯದ್ದಿರುತ್ತದೆ. ಸನ್ ೧೮೬೨ನೇ ವರ್ಷ, ಅಂದರೆ ಕಾನಡಾ ಜಿಲ್ಲೆಯು ಮುಂಬಯಿ ಇಲಾಖೆಗೆ ಸೇರಿದ ವರ್ಷ, ಆ ಜಿಲ್ಲೆಯಿಂದ ಚಳಿ ಜ್ವರವು ಧಾರವಾಡ ಜಿಲ್ಲೆಗೆ ಬಂತು. ಮೊದಲು ನಾಲ್ಕೆಂಟು ವರ್ಷ ಚಳಿ ಜ್ವರದಿಂದ ಬಹು ಜನರು ಮರಣ ಹೊಂದಿದರು. ಪಟಕೀ ಬೇನೆಯು ಈ ಜಿಲ್ಲೆಯಲ್ಲಿ ಆಗಾಗ್ಗೆ ಬರುತ್ತಿರುತ್ತದೆ; ಆದರೆ ಅದು ಪಶ್ಚಿಮದ ತಾಲೂ